1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (452) 272
2. ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
3. ಉತ್ತರಿಸುವ ಸಚಿವರು : ಶ್ರೀ ಬಿ.ಎಸ್.ಯಡಿಯೂರಪ್ಪ (ಸನ್ಮಾನ್ಯ ಮುಖ್ಯಮಂತ್ರಿಗಳು)

ಅ) ಉಡುಪಿ ಸಮಾವೇಶದಲ್ಲಿ ನಿರ್ಧಾಡಿಸಿದಂತೆ ವಿಶ್ವ ಕನ್ನಡ ಸಮ್ಮೇಳನವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸಲಾಗುವುದೇ;

ವಿಶ್ವಕನ್ನಡ ಸಮ್ಮೇಳನವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.

ಆ) ವಿಶ್ವ ಕನ್ನಡ ಸಮ್ಮೇಳನವನ್ನು ಜಿಲ್ಲೆಯಲ್ಲಿ ಯಾವ ತಿಂಗಳಿನಲ್ಲಿ ನಡೆಸುವ ಉದ್ದೇಶವಿದೆ.

ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ ಬಾರಿ ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ-2008-09ರ ಬಜೆಟ್ ಮಂಡನೆಯಲ್ಲಿ ರೂ.25.00 ಕೋಟಿ ಅನುದಾನ ನೀಡುವುದಾಗಿ ಘೋಷಿಸಿರುತ್ತಾರೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (453)273
2. ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
3. ಉತ್ತರಿಸುವವರು : (ಶ್ರೀ.ಎಸ್.ಸುರೇಶ್‌ಕುಮಾರ್)
: ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

1 ಚಳ್ಳಕೆರೆ ನಗರದಲ್ಲಿ ಕೊಳವೆ ಬಾವಿಗಳಲ್ಲಿನ ನೀರಿನ ಪ್ರಮಾಣ ಕುಸಿದಿದ್ದು, ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಚಳ್ಳಕೆರೆ ನಗರದ ಕೊಳವೆ ಬಾವಿಗಳ ಅಂತರ್ಜಲದ ಪ್ರಮಾಣ ಕುಸಿದಿರುವುದು ಗಮನಿಸಿ 2004-05ನೇ ಸಾಲಿನಲ್ಲಿ ರೂ.1.00 ಲಕ್ಷಗಳ ಅಂದಾಜಿನ ಮೊತ್ತದಲ್ಲಿ, ಅಜ್ಜಯ್ಯನಕೆರೆ ಅಂಗಳದಲ್ಲಿರುವ 4 ಸಂಖ್ಯೆ ಕೊಳವೆಬಾವಿಗೆ ಇಂಗಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಸದರಿ ಕೊಳವೆ ಬಾವಿಗಳ ಅಂತರ್ಜಲದ ಪ್ರಮಾಣವು ಶೇ.25 ರಷ್ಟು ಮಳೆಗಾಲದಲ್ಲಿ ಮಾತ್ರ ಹೆಚ್ಚಾಗುತ್ತದೆ.

2 ಚಳ್ಳಕೆರೆ ಪಟ್ಟಣಕ್ಕೆ ಬೇರೆ ಮೂಲಗಳಿಂದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇಲ್ಲ

3 ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ?

ಉದ್ಭವಿಸುವುದಿಲ್ಲ

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (454) 274**
**ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ**
**ಉತ್ತರಿಸುವವರು : (ಶ್ರೀ ಕೆ.ಜನಾರ್ಧನ ರೆಡ್ಡಿ) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು**

ಅ) ವೈಮಾನಿಕ ದಳಕ್ಕೆ ಬೇಕಾಗಿರುವ ಭೂಮಿ ಎಷ್ಟು;

ಮುಂದಿನ ಪೀಳಿಗೆಯ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಹಾಗೂ ಪರೀಕ್ಷಿಸಲು ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಅಧೀನ ರಕ್ಷಣಾ ಸಂಶೋಧನಾ (DRDO) ಸಂಸ್ಥೆಗೆ ಸುಮಾರು 4000 ಎಕರೆ ಭೂಪ್ರದೇಶದ ಅಗತ್ಯವಿದೆ.

ಆ) ವೈಮಾನಿಕ ದಳದ ತರಬೇತಿಯು ಇದೇ ಸ್ಥಳದಲ್ಲಿ ಸ್ಥಾಪಿಸುವ ಉದ್ದೇಶವೇನು;

ವಿಸ್ತೃತವಾದ ವೈಮಾನಿಕ ಹಾಗೂ ಭೂಸಮೀಕ್ಷೆಯನ್ನು ನಡೆಸಿದ ನಂತರ DRDO ಸಂಸ್ಥೆ ಚಿತ್ರದುರ್ಗ ಜಿಲ್ಲೆಯ ವರವು ಹಾಗೂ ಕುದಾಪುರ ಕಾವಲ್‌ನಲ್ಲಿ 2 ಸ್ಥಳಗಳನ್ನು ಹಾಲಿ ಕೋಲಾರದಲ್ಲಿನ VOD 179 ಸ್ಥಳಾಂತರಕ್ಕೆ ರಕ್ಷಣಾ ಮಂತ್ರಾಲಯ DRDO ಹಾಗೂ ನಾಗರೀಕ ವಿಮಾನಯಾನ ಮಂತ್ರಾಲಯ, ಭಾರತ ಸರ್ಕಾರವು ಗುರುತಿಸಿದೆ.

ಇ) ರೈತರ ಭೂಮಿಯನ್ನು ವಶಪಡಿಸಿಕೊಂಡ ವೈಮಾನಿಕ ದಳದ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವುದರಿಂದ ರೈತರಿಗಾಗುವ ಅನುಕೂಲತೆಗಳೇನು?

ಉದ್ದೇಶಿತ ಭೂಸ್ವಾಧೀನವು ಕೇವಲ ಸರ್ಕಾರದ ಜಮೀನನ್ನು ಒಳಗೊಂಡಿದೆ. ಆದುದರಿಂದ ರೈತರಿಗೆ ಯಾವುದೇ ನೇರವಾದ ಅನುಕೂಲ ಆಗುವುದಿಲ್ಲ, ಆದಾಗ್ಯೂ ಸ್ಥಳೀಯರಿಗೆ ಸ್ವಲ್ಪ ಮಟ್ಟಿಗೆ ಉದ್ಯೋಗವಕಾಶ ದೊರೆಯುವ ಸಾಧ್ಯತೆ ಇದೆ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (455)275**
**ಮಾನ್ಯ ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ**
**ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)**
**: ಪ್ರವಾಸೋದ್ಯಮ ಮತ್ತು ಮೂಲಭೂತ**